



ಮರೆಯುತ್ತೇವೆ. ನನ್ನಂತಹವರು ಕೊಟ್ಟರೂ ಅದು ಸದಾ ಅರೆಹೊಟ್ಟೆಯಲ್ಲೇ ಇರುತ್ತದೆ.

ವಿಶೇಷ ಎಂದರೆ, ಅದನ್ನು ಚಾರ್ಜಿಗೆ ಹಾಕಿದಾಗಲೇ ಹತ್ತಾರು ಕರೆಗಳ ಕಿರಿಕಿರಿ ಶುರುವಾಗುತ್ತದೆ. ಪವರ್ ಆನ್ ಆಗಿದ್ದಾಗ “ಹಲೋ'' ಎಂದು ಕಿವಿಗಿಟ್ಟರೆ ಕರೆಂಟು ಹರಿದು ಮೊಬೈಲ್ ಜೊತೆಗೆ ಕಿವಿಯೂ ಢಮಾರ್ ಎಂದರೆ ಎನ್ನುವ ಭಯ ಬೇರೆ ನನಗಿದೆ. ಹತ್ತು ನಿಮಿಷ ಮಾತನಾಡುವಷ್ಟು ಜೀವ ಇದೆಯಲ್ಲ ಎನ್ನುವ ಉಡಾಫೆಯಿಂದ ಮಾತಿನಲ್ಲಿ ಮೈ ಮರೆತರೆ, ಮುಖ್ಯ ವಿಷಯ ಬಂದಾಗಲೇ ಕರೆ ಕಡಿತವಾಗಿ ಅಭಾಸವಾಗುತ್ತದೆ. ಇದು ನಿಮ್ಮ ಅನುಭವವೂ ಇರಬಹುದು.

ಪ್ರತಿನಿತ್ಯ ತಮ್ಮ ಮೊಬೈಲನ್ನು ಚಾರ್ಜ್ ಮಾಡಿ ಶಿಸ್ತುಬದ್ಧ ಜೀವನ ನಡೆಸುವವರು, ಹತ್ತು